ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ನ್ಯಾಯಾಲಯ,ಹೊಸದುರ್ಗ.

ಅಸಲು ದಾವಾ ಸಂಖ್ಯೆ **231/2017** ದಿನಾಂಕ: **20.09.2025**

ಪಿ.ಡಬ್ಲ್ಯೂ: **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 2 ಮತ್ತು 3 ನೇ ಪ್ರತಿವಾದಿಯ ಪರ ಶ್ರೀ ಆರ್.ಕೆ. ವಕೀಲರಿಂದ**

9. ನಾನು ಕರಡು ಪತ್ರದ ಮೇಲೆ ಬರೆದ ಪತ್ರಕ್ಕೂ ಮತ್ತು ಛಾಪಾ ಕಾಗದದ ಮೇಲೆ ಬರೆದ ಪತ್ರಕ್ಕೂ , 2 ಪತ್ರಕ್ಕೂ ಸಹಿ ಮಾಡಿರುತ್ತೇನೆ. ಕರಡು ಪತ್ರಬರೆದ ದಿನಾಂಕ ನನಗೆ ಗೊತ್ತಿಲ್ಲ. ಛಾಪಾ ಕಾಗದ ಬರೆದ ಪತ್ರದ ದಿನಾಂಕ ನನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ನಡುವೆ ಜಮೀನಿಗೆ ಸಂಬಂಧಪಟ್ಟಂತೆ ಛಾಪಾ ಕಾಗದದಲ್ಲಿ ಪಾಲುವಿಭಾಗ ಪತ್ರ ಮಾಡಿರುತ್ತಾರೆ. ಛಾಪಾ ಕಾಗದ ಪತ್ರವನ್ನು ಹಳೇ ತಾಲ್ಲೂಕು ಕಚೇರಿಯ ಹತ್ತಿರ ರಂಗಪ್ಪ ಎಂಬುವವರು ಬೆರಳಚ್ಚು ಮಾಡಿರುತ್ತಾರೆ. ಪತ್ರಬರಹಗಾರರಾಗಿ ರಂಗಪ್ಪ ರವರು ಬರೆದಿರುತ್ತಾರೆ. ನಿಪಿ-9 ರ ಛಾಪಾ ಕಾಗದದ ಮೇಲೆ ಬರೆದ ಪತ್ರಕ್ಕೆ ಸುಮಾರು 8 ರಿಂದ 10 ಜನ ಸಹಿ ಮಾಡಿರುತ್ತೇವೆ. ಅವರ ಪೈಕಿ 4-5 ಜನರ ಹೆಸರು ತಿಳಿದಿದೆ, ಆದರೆ ಎಲ್ಲರ ಹೆಸರು ನನಗೆ ತಿಳಿದಿಲ್ಲ. ಅವರ ಪೈಕಿ ನಾನು , ಹನುಮಂತಪ್ಪ ತಂದೆ ಈಶ್ವರಪ್ಪ , ಬೈರಪ್ಪ ತಂದೆ ಈಶ್ವರಪ್ಪ , ಬಸವರಾಜಪ್ಪ ತಂದೆ ಕರಿಯಪ್ಪ ಉಳಿದವರ ಹೆಸರು ನೆನಪಿಲ್ಲ. ಅವರುಗಳ ವಯಸ್ಸು ಎಷ್ಟು ಎಂದು ನಗೆ ಹೇಳಲು ಬರುವುದಿಲ್ಲ. ಸಾಕ್ಷಿದಾರರಿಗೂ ಮತ್ತು 1 ನೇ ಪ್ರತಿವಾದಿ ನಡುವೆ ಸುಮಾರು 30 ವರ್ಷ ವಯಸ್ಸು ಅಂತರ ಇರುತ್ತದೆ.

10. ಗ್ರಾಮದಲ್ಲಿ ಊರಿನ ಹಿರಿಯರು ಮತ್ತು ಅನುಭವಸ್ಥರು ಮತ್ತು ವಯಸ್ಸಾದವರು ಪಂಚಾಯತಿ ಮಾಡುತ್ತಾರೆ ಎಂದರೆ ಸರಿ . ನಾವು, ಸಾಕ್ಷಿದಾರರು ಬೆಳಗ್ಗೆ ಸುಮಾರು 10.30 ರಿಂದ 11.00 ಗಂಟೆಗೆ ಹೊಸದುರ್ಗಕ್ಕೆ ಬಂದಿದ್ದೆವು , ಎಲ್ಲ ಮುಗಿಸಿ ಸಹಿಗಳನ್ನು ಮಾಡಿಸುಮಾರು ಮಧ್ಯಾಹ್ನ 1.30 ರಿಂದ

2.00 ಗಂಟೆಗೆ ವಾಪಸ್ ಹೋದೆವು. ನಮ್ಮನ್ನು ಹೊರತುಪಡಿಸಿ ಗ್ರಾಮದ ಸುಮಾರು 8-10 ಮಂದಿ ಇದ್ದರು , ಅವರ ಹೆಸರುಗಳು ಈಗ ನನಗೆ ನೆನಪಿಲ್ಲ. ಇವರುಗಳನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಛಾಪಾ ಕಾಗದಲ್ಲಿ ಬರವಣಿಗೆ ಆದ ವಿಷಯವನ್ನು ನಾನು ತಿಳಿದುಕೊಂಡಿರುವುದಿಲ್ಲ, ಸಾಕ್ಷಿ ಮುಂದುವರೆದು ವಾದಿ ಮತ್ತು 1 ನೇ ಪ್ರತಿವಾದಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-9 ರ ಪತ್ರದಲ್ಲಿ ಬರೆದ ವಿಷಯಗಳು ನನಗೆ ತಿಳಿದಿಲ್ಲ.

11. ಸದರಿ ಪತ್ರಗಳಲ್ಲಿ ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು ಸುಮಾರು 2 ಕಡೆ ಸಹಿ ಮಾಡಿರಬಹುದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಸಹಿಗಳು ನನ್ನವು. ನಿಪಿ-9 ರ ಪತ್ರದಲ್ಲಿ ಯಾವುದೇ ಪುಟಗಳಲ್ಲಿ ನನ್ನ ಸಹಿ ಇರುವುದಿಲ್ಲ. ಸಾಕ್ಷಿ ನಿಪಿ-10 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ-10(ಬಿ) ಎಂದು ಈಗಾಗಲೇ ಗುರುತಿಸಲಾಗಿದೆ. ನನ್ನ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳಿಗೂ ನಿಪಿ-10 ರಲ್ಲಿ ಇರುವ ನನ್ನ ನಿಪಿ-10(ಬಿ) ಸಹಿಗೂ ವ್ಯತ್ಯಾಸ ಇರುತ್ತದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ತಾನು ಎರಡು ರೀತಿ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಪಿ-10(ಬಿ) ನನ್ನ ಸಹಿ ಅಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಸಹಿಗೂ ನಿಪಿ-10(ಬಿ) ಸಹಿಗೂ ಅಜಗಜಾಂತರ ಸಹಿ ಇರುತ್ತದೆ ಎಂದರೆ ಸರಿ . ನಾನು ನಿಪಿ-10 ಕ್ಕೆ ಸಹಿ ಮಾಡದಿದ್ದರೂ ವಾದಿಯ ಮಾತನ್ನು ಕೇಳಿಕೊಂಡು ನಿಪಿ-10(ಬಿ) ಸಹಿ ನಾವೇ ಮಾಡಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿ ನನ್ನ ಸಹಿಯನ್ನು ಆತನೇ ಸೃಷ್ಟಿ ಮಾಡಿದ್ದು ನನ್ನ ನಿಜವಾದ ಸಹಿ ತಾಳೆ ಆಗದಕಾರಣ ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ .

12. ನಾನು ಹೇಳುವಂತೆ ನಿಪಿ-10 ರ ದಾಖಲೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗೂ ಸಹಿ ಮಾಡಿರುವುದಿಲ್ಲ. ನಿಪಿ-9 ಮತ್ತು 10 ಕ್ಕೆ

ವಾದಿಯೇ ಎಲ್ಲಾ ಸಾಕ್ಷಿದಾರರ ಸಹಿಗಳನ್ನು ಸೃಷ್ಟಿ ಮಾಡಿ ನಮ್ಮ ಮೂಲಕ ನಾವೇ ಸದರಿ ಸಹಿಗಳನ್ನು ಮಾಡಿರುತ್ತೇವೆ ಎಂದು ಸುಳ್ಳು ಹೇಳಿಸುತ್ತಿದ್ದಾನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ನ್ನು ಬರೆಯುವಾಗ ನಾವು ಮತ್ತು ಯಾವುದೇ ಸಾಕ್ಷಿದಾರರು ಹಾಗೂ ಪತ್ರ ಬರಹಗಾರರು ಇರಲಿಲ್ಲ ಹಾಗೂ ನಾವುಗಳು ಸದರಿ ದಾಖಲೆಗಳಿಗೆ ಸಹಿಗಳನ್ನು ಸಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ರಲ್ಲಿ ಸಾಕ್ಷಿದಾರರ ತಂದೆಯ ಹೆಸರು ವಯಸ್ಸು ಮತ್ತು ವಿಳಾಸ ಬರೆಯದ ಕಾರಣ ಸದರಿ ಸಾಕ್ಷಿದಾರರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಈ ರೀತಿ ಸಾಕ್ಷಿದಾರರು ಯಾರು ಎಂದು ನನಗೆ ತಿಳಿಯದಿದ್ದರೂ ವಾದಿಯ ಮಾತನ್ನು ಕೇಳಿಕೊಂಡು ಇಂತಹ ಸಾಕ್ಷಿದಾರರೇ ಸಹಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಹೆಸರು ಹೇಳಿದರೆ ಹೇಳುತ್ತೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

13. ನಾನು ನಮ್ಮ ಗ್ರಾಮದಲ್ಲಿ ಮತ್ತು ನಮ್ಮ ಮನೆತನದಲ್ಲಿ ನಡೆದ ವ್ಯವಹಾರಗಳ ಪತ್ರಗಳು ಮತ್ತು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಎಲ್ಲಾ ದಾಖಲೆಗಳಿಗೂ ನಾನು ಒಂದೇ ರೀತಿ ಸಹಿ ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿ . ಎಂದಿಗೂ ತಪ್ಪು ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಯಾರು ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಅವಿದ್ಯಾವಂತ ಇರುತ್ತಾನೆ ಎಂದು ನಾನು ಹೇಳಿ ಬರೆಸಿರುವುದಿಲ್ಲ. ಸಾಕ್ಷಿ ವಾದಿ ಎಸ್.ಎಸ್.ಎಲ್ .ಸಿ ವರೆಗೆ ಓದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ " ಈ ದಾವೆಯ ವಾದಿ ಪರಮೇಶ್ವರಪ್ಪ ನಿಗೆ ಸ್ವಲ್ಪ ಜಮೀನು ಹೆಚ್ಚಾಗಿ ಬಿಟ್ಟುಕೊಡುವಂತೆ ಸೂಚಿಸಿದ್ದರ ಮೇರೆಗೆ ಈಶ್ವರಪ್ಪ ಆತನಿಗೆ ಬೇಕಾದ ಫಲವತ್ತಾದ ಮತ್ತು ಊರಿಗೆ ಹತ್ತಿರ ಇರುವ ಜಮೀನುಗಳನ್ನೆಲ್ಲ ತೆಗೆದುಕೊಂಡು ಉಳಿದಂತಹ ಬೇರೆ ಕಡೆ ಇದ್ದ ಜಮೀನುಗಳನ್ನು ಸುಮಾರು 7 ರಿಂದ 8 ಎಕರೆ ಹೆಚ್ಚಿನ ಹಿಸ್ಸಾ ಭಾಗವನ್ನು ವಾದಿ ಪರಮೇಶ್ವರಪ್ಪನ ಭಾಗಕ್ಕೆ ಬಿಟ್ಟು ಕೊಟ್ಟಿರುತ್ತಾರೆ” ಎಂದು ನಾನು ಬರೆಸಿರುವುದಿಲ್ಲ.

14. ನಿಪಿ-9 ಮತ್ತು 10 ರ ದಾಖಲೆಗಳಲ್ಲಿಬರೆದಿರುವ ವಿಚಾರಗಳು ನನಗೆ ಮತ್ತು ಸಾಕ್ಷಿದಾರರಿಗೆ ತಿಳಿದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 2 ನೇ ಪುಟದಲ್ಲಿ " ಅದಾದ ಸುಮಾರು 3 ತಿಂಗಳ ನಂತರದಿಂದ ------------------------------ ರುಜು ಮಾಡಿರುತ್ತೇನೆ " ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ನಮ್ಮ ಊರಿನ ಹಿರಿಯರು ಕಲ್ಲಜ್ಜ ಅವರು ಈಗ ಮರಣ ಹೊಂದಿರುತ್ತಾರೆ. ಸದರಿ ಕಲ್ಲಜ್ಜ ಅಸ್ತಮ ಕಾಯಿಲೆಯಿದ್ದ ವಯಸ್ಸಾದ ಕಾರಣ ಮರಣ ಹೊಂದಿರುತ್ತಾರೆ. ನಾನು ನಮ್ಮ ಗ್ರಾಮದಲ್ಲಿ ಅವಶ್ಯಕತೆ ಇರುವವರಿಗೆ ರೆವೆನ್ಯೂ ದಾಖಲೆಗಳನ್ನು ಮಾಡಿಸಿ ಕೊಡಲು ಸಹಾಯ ಮಾಡುತ್ತೇನೆ. ವಯಸ್ಸಾದವರಿಗೆ, ವಿಧವೆಯವರಿಗೆ ಮಾಶಾಸನ ಬರುವಂತೆ ಅವರ ಪರ ಅರ್ಜಿ ಸಲ್ಲಿಸಿ ಸಹಾಯ ಮಾಡಿರುತ್ತೇನೆ. ನಾನು , ವಾದಿ ಮತ್ತು ನನ್ನ ಸ್ನೇಹಿತರು ಚೀಟಿ ವ್ಯವಹಾರ ನಡೆಸುತ್ತೇವೆ ಎಂದರೆ ಸರಿಯಲ್ಲ . ಆದ ಕಾರಣ ನಮ್ಮ ಗ್ರಾಮದ ಗ್ರಾಮಸ್ಥರಿಗೆ ಪ್ರಭಾವ ಬೀರಿ ನನ್ನ ಮಾತನ್ನು ಕೇಳುವಂತೆ ಒತ್ತಾಯ ಮಾಡುತ್ತೇನೆ ಎಂದರೆ ಸರಿಯಲ್ಲ .

15. ಈ ದಾವೆ ಮತ್ತು ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ರೀತಿ ಮಾಹಿತಿ ಇರದಿದ್ದರೂ ವಾದಿ ನನ್ನ ಸ್ನೇಹಿತನಾದ ಕಾರಣ ಆತನ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಬರೆದಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ದಾವಾ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.